

ವ್ಯವಸಾಯ ಮಾಡಲು ಸೂಕ್ತ ಜಮೀನು ಕೂಡ ಇರಲಿಲ್ಲ. ಜವುಗು ನೆಲದಲ್ಲಿ ನೀರಿಗೆ ಸಂಬಂಧಪಟ್ಟ ಚಟುವಟಿಕೆಗಳಷ್ಟೆ ಮಾಡಲು ಸಾಧ್ಯವಿತ್ತು. ಹೀಗಾಗಿ ಮೀನಿಗೆ ಹಾಕುವ ಬಲೆಯನ್ನೇ ಹಕ್ಕಿಗಳ ಬೇಟೆಗೂ ಬಳಸಿದರು. ಕೆಲವೊಮ್ಮೆ ಪ್ರಜ್ಞೆ ತಪ್ಪಿಸುವ ವಿಷವನ್ನು ಬಾತುಕೋಳಿಗಳಿಗೆ ಇಡುವ ತಂತ್ರವನ್ನೂ ಕಲಿತರು. ಮತ್ತೊಂದು ಅಚ್ಚರಿ ಎಂದರೆ, ಖಗಗಳಂತೆ ಮುಖ ಕವಚಗಳನ್ನು ಧರಿಸಿ ನೀರಿಗಿಳಿಯುವ ಹೊಸ ವರಸೆ ಕಲಿತದ್ದು. ಇಲ್ಲಿ ಹಕ್ಕಿಗಳಿಗೆ ಕೊಂಚವೂ ಸಂಶಯ ಬಾರದಂತೆ ತೀರಾ ಸಮೀಪಕ್ಕೆ ಹೋಗಿ ಸರಕ್ಕನೆ ಅವುಗಳ ಕುತ್ತಿಗೆ ಹಿಡಿಯುತ್ತಿದ್ದರು. ತಮ್ಮ ಸಮೀಪಕ್ಕೆ ಬರುತ್ತಿರುವುದು ತಮ್ಮದೇ ಪ್ರಜಾತಿಯ ಹಕ್ಕಿ ಎಂದು ತಪ್ಪಾಗಿ ಭಾವಿಸುತ್ತಿದ್ದ ಅವು ಸುಲಭವಾಗಿ ಇವರ ಕೈಗೆ ಸಿಕ್ಕಿ ಬೀಳುತ್ತಿದ್ದವು.

ಹೀಗೆ ನಿರಂತರವಾಗಿ ಶುರುವಾದ ಉಗ್ರಬೇಟೆಯ ದೆಸೆಯಿಂದ ಖಗಗಳ ಸಂಖ್ಯೆಯಲ್ಲಿ ಅಪಾರ ಇಳಿಕೆ ಕಾಣತೊಡಗಿತು. ಅಂದಹಾಗೆ ಈ ಚಿಲಿಕಾ ಸರೋವರವೂ ಸಾಮಾನ್ಯವಲ್ಲ! ಇಡೀ ಏಷ್ಯಾದಲ್ಲೇ ಅತಿ ದೊಡ್ಡ ಜೌಗುಪ್ರದೇಶ ಎಂದು ಹೆಸರು ಮಾಡಿರುವ ಜಾಗ. ಸುಮಾರು ಸಾವಿರದ ಒಂದುನೂರು ಚದರ ಕಿಲೋಮೀಟರ್ ವಿಸ್ತೀರ್ಣದಲ್ಲಿ ಹರಡಿಕೊಂಡಿರುವ ಇಲ್ಲಿನ ಅಗಾಧತೆಯಲ್ಲಿ ನಡೆದ ಪಕ್ಷಿಶಿಕಾರಿ ಅಂದಾಜಿಗೆ ಮೀರಿ ಹೋಗಿತ್ತು. ಈ ಪಾಟಿ ದೊಡ್ಡದಾದ ಸರೋವರದಲ್ಲಿ ಎಷ್ಟು ಹಕ್ಕಿಗಳು ಹಿಡಿದರೇನು? ಅವು ಮೀನು ಸಂತತಿಯಂತೆ ಮತ್ತೆ ಹೆಚ್ಚಾಗುತ್ತಲೇ ಇರುತ್ತವೆ ಎಂದು ಅವರು ಭಾವಿಸಿದ್ದರು. ಹೀಗೇ ದೋಚಿದರೆ ಒಂದು ದಿನ ಅವು ಕೂಡ ನಾಶವಾಗುತ್ತವೆ ಎಂಬ ಸಣ್ಣ ಅಂದಾಜು ಅವರಿಗೆ ಇರಲಿಲ್ಲ. ಹೊಟ್ಟೆಪಾಡು ಮುಖ್ಯವಾಗಿದ್ದ ಕಾರಣ ಅವರು ಯಾರೂ ಇದರ ಬಗ್ಗೆ ಕಿಂಚಿತ್ತೂ ತಲೆಕೆಡಿಸಿಕೊಳ್ಳಲು ಹೋಗಲೇ ಇಲ್ಲ.

ಈ ಹಳ್ಳಿಗೆ ಕಾಂಗಿ ನಗರದವರಾದ ನಂದಕಿಶೋರ್ ಭುಜ್ಬಲ್ ಎಂಬ ಹಕ್ಕಿ ಪ್ರೇಮಿ ಆಗಾಗ ಪಕ್ಷಿ ವೀಕ್ಷಣೆಗೆ ಬರುತ್ತಿದ್ದರು. ಖಗಗಳ ಸಂಖ್ಯೆಯಲ್ಲಿ ದಿಢೀರ್ ಇಳಿಮುಖವಾಗುತ್ತಿರುವ ಕುರಿತು ಸಾಕಷ್ಟು ತಲೆಕೆಡಿಸಿಕೊಂಡರು. ಊರ ಜನ ತಮ್ಮ ಕೊಲ್ಲುವ ಕಸುಬನ್ನು ಬಲು ರಹಸ್ಯವಾಗಿ ನಿಭಾಯಿಸುತ್ತಿದ್ದರು. ಈ ಕಾರಣದಿಂದ ವಿಷಯ ಎಲ್ಲಿಂದಲೂ ಹೊರಗೆ ಬರಲಿಲ್ಲ. ಜೊತೆಗೆ ಮೀಂಗುಲಿಗರಾದ ಇವರ ಬಗ್ಗೆ ಯಾರಿಗೂ ಸಣ್ಣ ಸಂಶಯವೂ ಇರಲಿಲ್ಲ. ಲಾಭದಲ್ಲಿದ್ದ ಡಾಬಾದವರು ಗುಟ್ಟನ್ನು ಬಿಟ್ಟು ಕೊಡಲು ಸಿದ್ಧರಿರಲಿಲ್ಲ. ಪಕ್ಷಿಪ್ರಿಯರಾಗಿದ್ದ ಅನೇಕರಿಗೆ ನಂದಕಿಶೋರ್ ಅವರಿಗೆ ಬಾಧಿಸುವ ಒಗಟೇ ಕಾಣತೊಡಗಿತು.

ಹವಾಮಾನದಲ್ಲಿ ಏನೋ ವೈಪರೀತ್ಯವಾಗಿ ಖಗಗಳಿಗೆ ತೊಂದರೆಯಾಗಿರಬಹುದು. ಇಲ್ಲವೇ